## ಸುದ್ದಿ ಸಿಂಚನ

### ಸ್ಪಾನಲ್ಲಿ ವೇಶ್ಯಾವಾಟಿಕೆ; ಓರ್ವ ಮಹಿಳೆ ಬಂಧನ

**ಮೈಸೂರು:** ವೇಶ್ಯಾವಾಟಿಕೆ ನಡೆಸುತ್ತಿದ್ದ ಸ್ಪಾ ಮೇಲೆ ದಾಳಿ ನಡೆಸಿರುವ ನಜರಬಾದ್‌ಪೊಲೀಸರು ಮೂವರು ಮಹಿಳೆಯರನ್ನು ರಕ್ಷಿಸಿ, ಓರ್ವ ಮಹಿಳೆಯನ್ನು ಬಂಧಿಸಿದ್ದಾರೆ. ಸಿದ್ದಾರ್ಥನಗರ ವಿನಯ ಮಾರ್ಗದಲ್ಲಿನ ಸ್ಪಾ ಮತ್ತು ಮಸಾಜ್ ಸೆಂಟರ್ ನಲ್ಲಿ ಅಕ್ರಮವಾಗಿ ವೇಶ್ಯಾವಾಟಿಕೆ ನಡೆಸುತ್ತಿರುವ ಬಗ್ಗೆ ಬಂದ ಮಾಹಿತಿ ಅನ್ವಯ ನಜರಬಾದ್ ಪೊಲೀಸರು ದಾಳಿ ನಡೆಸಿದ್ದಾರೆ. ಮೂವರು ಮಹಿಳೆಯರನ್ನು ರಕ್ಷಿಸಿದ್ದು, ಸ್ಪಾ ವ್ಯವಸ್ಥಾಪಕಿಯನ್ನು ಬಂಧಿಸಿದ್ದು, ಮಾಲೀಕ ಸಂದೀಪ್ ತಲೆ ಮರೆಸಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

### ಆರ್ಟ್ ಆಫ್ ಲಿವಿಂಗ್ ಶಿಬಿರ 27ರಂದು

**ಮೈಸೂರು:** ನಗರದ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್‌ಆಫ್ ಲಿವಿಂಗ್ ವತಿಯಿಂದ ನಾಡಿ ಪರೀಕ್ಷೆ ಕಾರ್ಯಕ್ರಮವು ಸೆ. 27ರಂದು ಹಮ್ಮಿಕೊಳ್ಳಲಾಗಿದೆ. ಮಾಹಿತಿಗಾಗಿ ಮೊ. 9886186580 ಸಂಪರ್ಕಿಸಬಹುದು.

# ಸಾಂಪ್ರದಾಯಿಕ ಜ್ಞಾನ ಅಳಿಯುವಿಕೆ ಆತಂಕಕಾರಿ

## ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ | ಮಹಾಜನ ಕಾಲೇಜಿನಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಾಂಪ್ರದಾಯಿಕ ಬೇರುಗಳಿಲ್ಲದೆ ಆರೋಗ್ಯಕರ ರಾಷ್ಟ್ರ ನಿರ್ಮಾಣ ಅಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅಭಿಪ್ರಾಯಪಟ್ಟರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜು ಮಾನವಿಕ ವಿಭಾಗಗಳು, ಐಕ್ಯೂಎಸಿ ಹಾಗೂ ಕಾಲೇಜಿನ ಐಕೆಎಸ್ ಸೆಲ್ ಸಹಯೋಗದಲ್ಲಿ '21ನೇ ಶತಮಾನದಲ್ಲಿ ಸಾಂಪ್ರದಾಯಿಕ ಜ್ಞಾನ ಪದ್ಧತಿಯ ಮರುಸ್ಥಾಪನೆ - ಪರಂಪರೆಯಿಂದ ಪ್ರಗತಿಯತ್ತ ವಿಚಾರದ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.



ಇಂದಿನ ಕಾಲಮಾನದಲ್ಲಿ ತಾಂತ್ರಿಕತೆಯ ಭರಾಟೆಯಲ್ಲಿ ಸಾಂಪ್ರದಾಯಿಕ ಜ್ಞಾನ ಮತ್ತು ನಮ್ಮ ಸಂಸ್ಕೃತಿ ಅಳಿದು ಹೋಗುತ್ತಿರುವುದು ಕಳವಳಕಾರಿ ವಿಚಾರವಾಗಿದೆ. ಅನುಭವವು ವ್ಯಕ್ತಿಯನ್ನು ಪರಿಪೂರ್ಣಗೊಳಿಸುವುದರಿಂದ ಹಿರಿಯರ ಅನುಭವವನ್ನು ಪಡೆದುಕೊಳ್ಳುವುದು ಉತ್ತಮ. ಹಳೆಯ ಕಾಲದ ಮಾಹಿತಿ ಹಾಗೂ ದತ್ತಾಂಶಗಳು ಈಗಿನ ಕಾಲಮಾನಕ್ಕೂ ಅತ್ಯಗತ್ಯವಾಗಿವೆ. ಜ್ಞಾನದೊಂದಿಗೆ ತಾಂತ್ರಿಕತೆ ಜೊತೆಗೂಡಿದರೆ ಹಲವು ಕ್ಷೇತ್ರಗಳಲ್ಲಿ ವಿಸ್ಮಯಕಾರಿ ಸಾಧನೆಗಳನ್ನು ಮಾಡಬಹುದು ಎಂದರು.

ಮಹಾಜನ ಶಿಕ್ಷಣ ಸಂಸ್ಥೆಯ ಖಜಾಂಚಿ ಎಸ್.ಕೆ. ಸಂಜಯ್ ಮಾತನಾಡಿ, ಪರಂಪರೆ ಎಂಬುದು ನಮಗೆ ಜೀವನದ ಮೌಲ್ಯಗಳನ್ನು ಕಲಿಸಿಕೊಡುತ್ತದೆ. ನಮ್ಮ ಪರಂಪರೆ ಹಳೆಯದಲ್ಲ, ಬದಲಾಗಿ ಕಾಲಮಾನದ ಪ್ರವಾಹದಲ್ಲಿ ಅದು ಕಳೆದುಹೋಗುತ್ತಿದೆ ಅಷ್ಟೇ. ಸಾವಿರಾರು ವರ್ಷಗಳ ಹಿಂದೆ ನಮ್ಮ ಪೂರ್ವಜರು ಹೊಂದಿದ್ದ ವಿಜ್ಞಾನವನ್ನು ಇತ್ತೀಚಿನ ಕೃತಕ ಬುದ್ಧಿಮತ್ತೆ ಇಂದಿಗೂ ಸಂಪೂರ್ಣವಾಗಿ ಕಂಡುಹಿಡಿಯಲು ಸಾಧ್ಯವಿಲ್ಲ ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಪರಂಪರೆ ಎಂದರೆ ಸಿಕ್ಕಿದ್ದನ್ನು ಹಾಗೇ ಉಳಿಸಿಕೊಳ್ಳುವುದಲ್ಲ, ಬದಲಾಗಿ ಅದರ ಆಳವಾದ ಅರ್ಥವನ್ನು ತಿಳಿದುಕೊಂಡು ಜೀವನಕ್ಕೆ ಅಳವಡಿಸಿಕೊಳ್ಳುವುದೇ ನಿಜವಾದ ಪರಂಪರೆಯಾಗಿದೆ ಎಂದರು.

ಸಂಕಿರಣದ ದಿಕ್ಸೂಚಿ ಭಾಷಣಕಾರ ಹೈದರಾಬಾದ್‌ನ ಸಿಬಿಐಟಿ ಸಂಸ್ಥೆಯ ಪ್ರೊಫೆಸರ್ ಹಾಗೂ ವಿಎಕೆ ಸಂಯೋಜಕ ಡಾ.ಜಿ. ಸುರೇಶ್ ಬಾಬು ಮಾತನಾಡಿ, ಇಂದಿನ ಡಿಜಿಟಲ್ ಯುಗದಲ್ಲಿ ಯುವ ಜನತೆ ಕೇವಲ ಲೈಕ್, ಶೇರ್ ಹಾಗೂ ಕಮೆಂಟ್‌ಗಳ ಅಲ್ಗಾರಿದಮ್‌ಗಳಿಗೆ ಮಾತ್ರ ಸೀಮಿತಗೊಳ್ಳುತ್ತಿದ್ದು, ನಮ್ಮ ಪ್ರಾಚೀನ ಭಾರತೀಯ ಪುರುಷಾರ್ಥಗಳ ಮೂಲಕ ಜೀವನದ ಮೂಲ ಮೌಲ್ಯಗಳನ್ನು ಮರುಸ್ಥಾಪಿಸಿಕೊಳ್ಳಬೇಕಾದ ತುರ್ತು ಅಗತ್ಯವಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್ ಮಾತನಾಡಿ, ಭೌತಶಾಸ್ತ್ರ ಮತ್ತು ಪರಿಸರ ಜೊತೆಗೆ ಸಾಗುವ ವೇದಾಂತ, ತತ್ವಶಾಸ್ತ್ರ ಹಾಗೂ ವಿಜ್ಞಾನಗಳೆರಡೂ ಆಧುನಿಕ ವಿಜ್ಞಾನದೊಂದಿಗೆ ಸಮಾನವಾಗಿ ನಿಲ್ಲಬಲ್ಲವು ಎಂದು ಅಭಿಪ್ರಾಯಪಟ್ಟರು.

ಕಾಲೇಜಿನ ಶೈಕ್ಷಣಿಕ ಡೀನ್ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಎಚ್. ಶ್ರೀಧರ್, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಎಂ.ಎನ್. ವೆಂಕಟಲಕ್ಷ್ಮಿ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ. ಸೋಮಶೇಖರ, ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಡಿ. ಗೀತಾ, ಐಕೆಎಸ್ ಸೆಲ್‌ನ ಸಂಯೋಜಕರು ಹಾಗೂ ಹಿಂದಿ ವಿಭಾಗದ ಮುಖ್ಯಸ್ಥ ಪರಮೇಶ್ವರ ಹೆಗಡೆ, ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಪಿ.ಜಿ. ಪುಷ್ಪರಾಣಿ, ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಜಿ. ದೊಡ್ಡರಸಯ್ಯ ಮತ್ತು ಡಾ.ಸಿ.ಎಸ್. ಸಿದ್ದರಾಜು, ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕ ಎ. ಆರ್. ನಂದೀಶ, ಕಾಲೇಜಿನ ವಿವಿಧ ವಿಭಾಗಗಳ ಅಧ್ಯಾಪಕರು ಇದ್ದರು.

ಎಂ.ಎನ್. ವೆಂಕಟಲಕ್ಷ್ಮಿ ಸ್ವಾಗತಿಸಿದರು. ಪರಮೇಶ್ವರ ಹೆಗಡೆ ವಂದಿಸಿದರು. ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಎನ್. ಸುನಿಲ್ ನಿರೂಪಿಸಿದರು. ಅಂತಿಮ ವರ್ಷದ ಬಿ.ಎಸ್ಸಿ ವಿದ್ಯಾರ್ಥಿನಿ ಎಂ. ಸೃಜನಾ ಪ್ರಾರ್ಥಿಸಿದರು.

# ದಲಿತರ ಮೇಲೆ ದೌರ್ಜನ್ಯ ಗೃಹ ಇಲಾಖೆ ವೈಫಲ್ಯಕ್ಕೆ ಸಾಕ್ಷಿ: ಅರುಣ್‌ಕುಮಾರ್ ಆರೋಪ

## ಕ್ರಮ ಕೈಗೊಳ್ಳದಿದ್ದರೆ ಗೃಹ ಸಚಿವರ ನಿವಾಸಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ರಾಜ್ಯಾದ್ಯಂತ ಮಾದಿಗ ಮತ್ತು ಇತರ ದಲಿತ ಸಮುದಾಯದ ಮೇಲೆ ಸರಣಿ ಜಾತಿ ದೌರ್ಜನ್ಯಗಳು ಗೃಹ ಇಲಾಖೆ ವೈಫಲ್ಯದ ಕಾರಣ ನಡೆಯುತ್ತಿವೆ. ಹೀಗಾಗಿ ಇವುಗಳ ತಡೆಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತುರ್ತು ಕ್ರಮ ಕೈಗೊಳ್ಳದಿದ್ದರೆ ಅವರ ನಿವಾಸಕ್ಕೆ ಮಾದಿಗ, ಸಮಗಾರ, ಡೋಹರ, ದಕ್ಕಲಿಗ ಮತ್ತು ಮೋಚಿಗಾರ ಸಂಘಟನೆಗಳ ಒಕ್ಕೂಟ ಹಾಗೂ ದಲಿತರ ಸಮುದಾಯ ಮುತ್ತಿಗೆ ಹಾಕಿ ಪ್ರತಿಭಟಿಸಬೇಕಾಗುತ್ತದೆ ಎಂದು ಹಿರಿಯ ವಕೀಲ ಅರುಣ್ ಕುಮಾರ್‌ಎಚ್ಚರಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕಳೆದ 2 ತಿಂಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಾದಿಗ ಸಮುದಾಯ ಸೇರಿದಂತೆ ಇತರ ದಲಿತ ಸಮುದಾಯಗಳವರ ಜಾತಿ ಕಾರಣಕ್ಕಾಗಿನಜ ಕೊಲೆ ಮತ್ತು ಅತ್ಯಾಚಾರದ ಕೊಲೆಯ 10 ಗಂಭೀರ ಪ್ರಕರಣ ವರದಿಯಾಗಿವೆ. ಇವು ರಾಜ್ಯ ಗೃಹ ಇಲಾಖೆಯ ಸಂಪೂರ್ಣ ವೈಫಲ್ಯ ಬಿಂಬಿಸುತ್ತಿದ್ದು, ರಾಜ್ಯದಲ್ಲಿ ಪರಿಶಿಷ್ಟ ಜಾತಿ ಸಮುದಾಯಗಳಿಗೆ ಕಾನೂನ ಸುವ್ಯವಸ್ಥೆ ಹಾಗೂ ಸಂವಿಧಾನಾತ್ಮಕ ರಕ್ಷಣೆ ನಿಜಕ್ಕೂ ಜಾರಿಯಲ್ಲಿದೆಯೇ ಎಂಬ ಗಂಭೀರ ಪ್ರಶ್ನೆ ಏಳುವಂತಾಗಿದೆ. ಈ ಹಿನ್ನೆಲೆಯಲ್ಲಿ ಮಾದಿಗ ಸಂಘಟನೆಗಳ ಒಕ್ಕೂಟ ಈ ಎಲ್ಲಾ ಘಟನೆಗಳನ್ನು ತೀವ್ರವಾಗಿ ಖಂಡಿಸುತ್ತದೆ ಎಂದರು.

ರಾಯಚೂರು, ಹಾಸನ, ಮೈಸೂರು, ಯಾದಗಿರಿ ಮೊದಲಾದ ಕಡೆಗಳಲ್ಲಿ ಕ್ಷುಲ್ಲಕ ಕಾರಣಕ್ಕೆ ದಲಿತ ವ್ಯಕ್ತಿಗಳ ಹಲ್ಲೆ, ಲೈಂಗಿಕ ದೌರ್ಜನ್ಯವೆಸಗಿ ಹಲ್ಲೆ ಮೊದಲಾದವು ಹೆಚ್ಚಿನ ಪ್ರಮಾಣದಲ್ಲಿ ನಡೆದ ವರದಿಗಳು ಬಂದಿವೆಯಾದರೂ ಗೃಹ ಇಲಾಖೆ ಇವನ್ನು ತಡೆಯುವಲ್ಲಿ, ದಲಿತರಿಗೆ ರಕ್ಷಣೆ ನೀಡುವ ನಿಟ್ಟಿನಲ್ಲಿ ವಿಫಲವಾಗಿದೆ. ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸ್ವತಃ ಪರಿಶಿಷ್ಟ ಜಾತಿ ಸಮುದಾಯದಿಂದ ಬಂದವರಾಗಿದ್ದರೂ ಒಮ್ಮೆಯೂ ಸಂತ್ರಸ್ತರ ಮನೆಗೆ ಭೇಟಿ ನೀಡಿ ಧೈರ್ಯ ತುಂಬಿಲ್ಲ. ಸಮುದಾಯಕ್ಕೆ ರಕ್ಷಣೆ ಒದಗಿಸುವ ಕ್ರಮ ಕೈಗೊಂಡಿಲ್ಲ. ಹೀಗಾಗಿ ಈ ನಿಟ್ಟಿನಲ್ಲಿ ಶೀಘ್ರ ಕಾರ್ಯಪ್ರವೃತ್ತರಾಗದಿದ್ದರೆ ಅವರ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಬೇಕಾಗುತ್ತದೆಂದು ಎಚ್ಚರಿಸಿದರು.

ಇದೇ ವೇಳೆ, ಟಿ. ನರಸೀಪುರ ಘಟನೆ ಕುರಿತಂತೆ ಮಾತನಾಡಿ ಇನ್ ಸ್ಪೆಕ್ಟರ್‌ಧನಂಜಯ ವಿರುದ್ಧ ಎಫ್‌ಐಆರ್‌ದಾಖಲಿಸಬೇಕಾಗಿತ್ತೇ ಹೊರತು ಮಾಜಿ ಸಂಸದ ಪ್ರತಾಪ್‌ಸಿಂಹ ವಿರುದ್ಧವಲ್ಲ, ಪ್ರತಾಪ್‌ಸಿಂಹ ತಪ್ಪೇನನ್ನೂ ಹೇಳಿಲ್ಲ, ಅವರ ಹೇಳಿಕೆಯನ್ನು ಸರಿಯಾಗಿ ಅರ್ಥೈಸಿಕೊಳ್ಳದೇ ಅಟ್ರಾಸಿಟಿ ಕೇಸ್ ದಾಖಲಿಸಿರುವುದು ಸರಿಯಲ್ಲ. ಇದರಿಂದಾಗಿ ನೈಜ ಅಟ್ರಾಸಿಟಿ ಕೇಸ್‌ಗಳ ಬಗ್ಗೆಯೂ ಜನತೆ ಸಂಶಯ ಪಟ್ಟು, ಗೌರವ ಕಳೆದುಕೊಳ್ಳುವಂತಾಗುತ್ತದೆ ಎಂದು ಬೇಸರಿಸಿದರು.

ನರಸಿಂಹಮೂರ್ತಿ, ಮಧುರಾಜ್, ಸಿದ್ದರಾಜು, ಶಿವಣ್ಣ, ರಾಜಣ್ಣ ಇದ್ದರು.

## 27ಕ್ಕೆ ಮಕ್ಕಳತ್ರ ಮಾತಾಡಿ ಪ್ಲೀಸ್ ಸಂವಾದ

**ಮೈಸೂರು:** ನಗರದ ಡಿವಿಜಿ ಬಳಗ ಪ್ರತಿಷ್ಠಾನವು ಸೆ. 27 ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 12.30ಕ್ಕೆ ಬಿಎಸ್‌ಎಸ್‌ವಿದ್ಯೋದಯದಲ್ಲಿ ಮಕ್ಕಳೊಂದಿಗೆ ಮಾತನಾಡುವುದು ಹೇಗೆ? ಎಂಬ 'ಮಕ್ಕಳತ್ರ ಮಾತಾಡಿ ಪ್ಲೀಸ್' ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ. ಮನೋವೈದ್ಯ ಮಣಿಪಾಲದ ಡಾ.ಎ.ವಿ. ಬಾಳಿಗಾ ಆಸ್ಪತ್ರೆಯ ಡಾ. ವಿರೂಪಾಕ್ಷ ದೇವರಮನೆ ಅವರು ಸಂವಾದ ನಡೆಸುವರು. ಮಕ್ಕಳನ್ನು ಅರ್ಥಮಾಡಿಕೊಳ್ಳುವುದು ಏಕೆ ಇಷ್ಟೊಂದು ಕಷ್ಟವಾಗುತ್ತಿದೆ? ಮಕ್ಕಳೊಂದಿಗೆ ಹೇಗೆ ಸಂವಹನ ನಡೆಸಬೇಕು? ಶಿಸ್ತು, ಪ್ರೀತಿ ಮತ್ತು ಸ್ವಾತಂತ್ರ್ಯದ ನಡುವೆ ಸಮತೋಲನ ಹೇಗೆ ಸಾಧಿಸಬೇಕು? ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಇಂದಿನ ಪೋಷಕರ ಮುಂದಿರುವ ಸವಾಲುಗಳು ಮತ್ತು ಅವುಗಳನ್ನು ಎದುರಿಸುವ ಮಾರ್ಗಗಳ ಕುರಿತು ಮಾತನಾಡುವರು. ಹೆಚ್ಚಿನ ಮಾಹಿತಿಗೆ ಡಿವಿಜಿ ಬಳಗ ಪ್ರತಿಷ್ಠಾನದ ಸಂಚಾಲಕ ಕನಕರಾಜು ಮೊ. 94489 73582 ಸಂಪರ್ಕಿಸಬಹುದು.

## 27ರಂದು 17ನೇ ವಾರ್ಷಿಕೋತ್ಸವ

**ಮೈಸೂರು:** ಜೆ.ಪಿ. ನಗರದ ಶ್ರೀ ಪುಟ್ಟರಾಜ ಗವಾಯಿಗಳ ಕ್ರೀಡಾಂಗಣದಲ್ಲಿ ಅರಿವಿನ ಮನೆ ಮಹಿಳಾ ಬಳಗದ 17ನೇ ವಾರ್ಷಿಕೋತ್ಸವವು ಸೆ. 27ರ ಬೆಳಗ್ಗೆ 10.30ಕ್ಕೆ ಜೆಎಸ್‌ಎಸ್‌ಪಬ್ಲಿಕ್ ಶಾಲೆಯಲ್ಲಿ ನಡೆಯಲಿದೆ. ಎಂ.ವಿ. ರೂಪ ಉದ್ಘಾಟಿಸುವರು. ವಿಶ್ರಾಂತ ಪ್ರಾಧ್ಯಾಪಕ ಎಂ. ಎಸ್. ವೇದ ಸನ್ಮಾನಿಸಲಾಗುವುದು. ಮುಖ್ಯ ಅತಿಥಿಯಾಗಿ ಬಿ.ಎಲ್. ಭೈರಪ್ಪ ಭಾಗವಹಿಸುವರು. ಬಳಗದ ಅಧ್ಯಕ್ಷೆ ಲೀಲಾಂಬಿಕ ಸುಬ್ಬಪ್ಪ ಅಧ್ಯಕ್ಷತೆ ವಹಿಸುವರು.

## ನಾಳೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿರುವ ಕಲಾಸುರುಚಿಯಲ್ಲಿ ಸೆ. 26ರ ಸಂಜೆ 4.30 ರಿಂದ 5.30ರವರೆಗೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮವು ಡ್ಡ. ನಂ. 476ರ ಸುರುಚಿ ರಂಗಮನೆಯಲ್ಲಿ ನಡೆಯಲಿದೆ. ಶಿಕ್ಷಣ ಇಲಾಖೆಯ ನಿವೃತ್ತ ಕಲಾ ಶಿಕ್ಷಕಿ ಎಸ್. ಸುಬ್ಬುಲಕ್ಷ್ಮಿ ಮಕ್ಕಳಿಗೆ ಕಥೆ ಹೇಳುವರು. ಮಾಹಿತಿಗಾಗಿ ಮೊ. 9243581097, 9945943115 ಸಂಪರ್ಕಿಸುವುದು.



ಗೌತಮ ಶಿಕ್ಷಣ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಕಲಾಮಂದಿರದ ಕಿರುರಂಗಮಂದಿರದಲ್ಲಿ ಏರ್ಪಡಿಸಿದ್ದ ಜನಪದ ಮತ್ತು ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮಹಾರತ್ನ ಟ್ರಸ್ಟ್ ಅಧ್ಯಕ್ಷ ಮೈಸೂರು ಮಹಾಲಿಂಗ, ಕಲಾವಿದರಾದ ವಿಶ್ವನಾಥ್ ಎಲ್. ಚಂಗಚಹಳ್ಳಿ, ಡಾ.ಪಿ. ಸೋಮಶೇಖರ್, ಕೃಷ್ಣಮೂರ್ತಿ ತಲಕಾಡು ಭಾಗವಹಿಸಿದ್ದರು.



ಮಹಾಲಕ್ಷ್ಮಿ ಮಹಿಳಾ ಮಂಡಳಿಯ 32ನೇ ವಾರ್ಷಿಕೋತ್ಸವವು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ಮಂತ್ರಮಹರ್ಷಿ ಸಭಾಂಗಣದಲ್ಲಿ ಸುತ್ತೂರು ಮಠದ ಕಿರಿಯ ಶ್ರೀಗಳಾದ ಜಯರಾಜೇಂದ್ರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆಯಿತು. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕಿ ಡಾ.ಕೆ.ಬಿ. ಸುಮಾ, ಮಂಡಳಿಯ ಅಧ್ಯಕ್ಷೆ ಎಂ.ಎನ್. ದಿವ್ಯಾ ಚೇತನ್, ಉಪಾಧ್ಯಕ್ಷೆ ನೀಲಾಂಬಿಕ ದೇವಿ ನಾಗರಾಜ್ ಭಾಗವಹಿಸಿದ್ದರು.

---

### ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ:ಮೈಅಪ್ರಾ/ವಿ.ತ-5ಎ/2026-27 ದಿನಾಂಕ:21.09.2026

**ಪ್ರಕಟಣೆ**

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ವತಿಯಿಂದ ಶ್ರೀ ಮಹಮದ್ ಅಲಿ.ಎಂ. ರವರಿಗೆ ದಿನಾಂಕ:15.04.1986 ರಂದು ಕೆಸರೆ 3ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ:974 ನಿವೇಶನವು ಮಂಜೂರಾಗಿರುತ್ತದೆ. ದಿನಾಂಕ:18.06.1988ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ನಂತರ ಶ್ರೀ.ಮಹಮದ್ ಅಲಿ.ಎಂ.ರವರು 4ನೇ ಪುಸ್ತಕದ 3031ನೇ ಸಂಪುಟದಲ್ಲಿ 93-94ನೇ ಪುಟದಲ್ಲಿ 352ನೇ ನಂಬರಾಗಿ ದಿ:19.06.1993ರಂದು ಶ್ರೀ.ಎಂ.ಸಿ.ವೈಕುಂಟೇಗೌಡ ರವರಿಗೆ ನೋಂದಾಯಿತ ಜಿಪಿಎ ನೀಡಿರುತ್ತಾರೆ.

ನಂತರ ಶ್ರೀ.ಎಂ.ಸಿ.ವೈಕುಂಟೇಗೌಡ ರವರು 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಎನ್-1-9586-2007-08 ಆಗಿ ದಿ:10.09.2007 ರಂದು ಶ್ರೀ.ವಿನ್ಸಂಟ್ ಡಿಸಿಲ್ವಾ ರವರ ಹೆಸರಿಗೆ ನೋಂದಾಯಿತ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ.

ಅದರಂತೆ ಶ್ರೀ.ವಿನ್ಸಂಟ್ ಡಿಸಿಲ್ವಾ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ವರ್ಗಾವಣೆ ಹಾಗೂ ಕ್ರಯಪತ್ರ ನೀಡಬೇಕೆಂದು ಕೋರಿರುತ್ತಾರೆ. ಮೇಲ್ಕಂಡ ನಿವೇಶನಕ್ಕೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/- ವಿಶೇಷ ತಹಸೀಲ್ದಾರ್
ವಲಯ ಕಛೇರಿ-5ಎ, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

---

### ಭಾರತೀಯ ಸ್ಟೇಟ್ ಬ್ಯಾಂಕ್
SBI
ದೊಡ್ಡಬಾಗಿಲು ಶಾಖೆ, 106/1, ಜುಂಜರು ನಂ.257, ಬಸ್ ಸ್ಟಾಂಡ್ ರಸ್ತೆ, ದೊಡ್ಡಬಾಗಿಲು, ಟಿ ನರಸಿಪುರ ತಾಲ್ಲೂಕು, ಮೈಸೂರು ಜಿಲ್ಲೆ-571120.

**ಸಾರ್ವಜನಿಕ ಪ್ರಕಟಣೆ**

ನಮ್ಮ ಭಾರತೀಯ ಸ್ಟೇಟ್ ಬ್ಯಾಂಕ್, ದೊಡ್ಡಬಾಗಿಲು ಶಾಖೆ (41063) ದಿನಾಂಕ 26.10.2026 ರಿಂದ ಹೆಚ್ಚು ಅನುಕೂಲಕರ ಹಾಗೂ ವಿಶಾಲವಾದ ಈ ಕೆಳಗೆ ತಿಳಿಸಿರುವ ಹೊಸ ವಿಳಾಸ ಕಟ್ಟಡಕ್ಕೆ ಸ್ಥಳಾಂತರಗೊಳ್ಳಲಿದೆ ಎಂದು ತಿಳಿಸಲು ನಾವು ಹರ್ಷಿಸುತ್ತೇವೆ. ಹೊಸ ವಿಳಾಸ **ಸರ್ವೆ ನಂ.108, ಮರಿಗಾಲಿ-ಟಿ.ನರಸಿಪುರ ಮುಖ್ಯ ರಸ್ತೆ, ದೊಡ್ಡಬಾಗಿಲು, ಟಿ ನರಸಿಪುರ ತಾಲ್ಲೂಕು, ಮೈಸೂರು-571120. ಹಾಗೂ ದೂರವಾಣಿ ಸಂಖ್ಯೆ 9353707532.**

ಈ ಸಂಬಂಧವಾಗಿ ಮಧ್ಯಂತರ ಅವಧಿಯಲ್ಲಿ ನಮ್ಮ ಗೌರವಾನ್ವಿತ ಗ್ರಾಹಕರಿಗೆ ಉಂಟಾಗಬಹುದಾದ ಯಾವುದೇ ಅನಾನುಕೂಲತೆಗಾಗಿ ನಾವು ವಿಷಾದಿಸುತ್ತೇವೆ. ಎಟಿಎಂ/ ಆನ್‌ಲೈನ್ ಬ್ಯಾಂಕಿಂಗ್ ಮತ್ತು ಇತರ ಸೇವೆಗಳು ದಿನದ 24 ಗಂಟೆಯೂ ಲಭ್ಯವಿರುವುದರಿಂದ, ಗ್ರಾಹಕರು ನಮ್ಮ ಈ ಯಾವುದೇ ಸಮಯದಲ್ಲಿ ಲಭ್ಯವಿರುವ ಸೇವಾ ಮಾರ್ಗಗಳನ್ನು ಬಳಸಿಕೊಳ್ಳುವಂತೆ ಕೋರಲಾಗಿದೆ.

ಅಗತ್ಯವಿದ್ದಲ್ಲಿ ಶಾಖಾ ಮುಖ್ಯಸ್ಥರನ್ನು ಸಂಪರ್ಕಿಸುವಂತೆ ನಮ್ಮ ಗೌರವಾನ್ವಿತ ಗ್ರಾಹಕರಲ್ಲಿ ವಿನಂತಿಸುತ್ತೇವೆ. ಹೊಸ ಸ್ಥಳದಿಂದ ನಮ್ಮ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲು ನಾವು ಎದುರು ನೋಡುತ್ತಿದ್ದೇವೆ.

ಶ್ರೀ.ಮಹೇಶ್ ಚಂದ್ರು.ಹೆಚ್.ಎಂ ಮೊಬೈಲ್ ಸಂಖ್ಯೆ : 9353707532, ಶಾಖೆ ವ್ಯವಸ್ಥಾಪಕರು,
ಭಾರತೀಯ ಸ್ಟೇಟ್ ಬ್ಯಾಂಕ್, ದೊಡ್ಡಬಾಗಿಲು ಶಾಖೆ ಮೈಸೂರು.

---

### ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕಿನ ಚಂದಕವಾಡಿ ಹೋಬಳಿ ವಮಲ್ಲೇದೇವನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂಬರ್ 50/1 ರಲ್ಲಿರುವ 2.06 ಎಕರೆ, ಸರ್ವೆ ನಂಬರ್ 50/2 ರಲ್ಲಿರುವ 4.12 ಎಕರೆ, ಸರ್ವೆ ನಂಬರ್ 50/3 ರಲ್ಲಿರುವ 2.06 ಎಕರೆ, ಒಟ್ಟು 8.24 ಎಕರೆ ಜಮೀನನ್ನು ಏಜಾಜ್ ಅಹಮದ್, ನಿಸ್ಸಾರ್ ಅಹಮದ್ ಮತ್ತು ಇಕ್ಬಾಲ್ ಅಹಮದ್ ರವರು ಮತ್ತು ಅವರ ಕುಟುಂಬ-ದವರಿಂದ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿಸಲು ಇಚ್ಛಿಸಿದ್ದು, ಈ ಸಂಬಂಧವಾಗಿ ಮೇಲ್ಕಂಡ ಸರ್ವೆ ನಂಬರ್‌ಗಳ ಮೇಲೆ ಮೇಲ್ಕಂಡ-ರವರನ್ನು ಹೊರತುಪಡಿಸಿ ಬೇರೆ ಯಾರಿಗಾದರೂ ಹಕ್ಕು ಭಾದ್ಯತೆ, ಹಿತಾಸಕ್ತಿ ಇದ್ದಲ್ಲಿ ಈ ದಿನಾಂಕದಿಂದ **8 ದಿನಗಳ ಒಳಗಾಗಿ** ನಮ್ಮನ್ನು ಸಂಪರ್ಕಿಸುವುದು, ತಪ್ಪಿದ್ದಲ್ಲಿ ಯಾವುದೇ ತಕರಾರು ಹಾಗೂ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ನಮ್ಮ ಕಕ್ಷಿದಾರರು ನಡೆಸುತ್ತಾರೆಂದು ಈ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಯಪಡಿಸುತ್ತೇವೆ.

**ಪಿ. ಹೇಮಂತ್‌ಕುಮಾರ್, ಬಿ.ಎ., ಎಲ್‌ಎಲ್.ಬಿ.**
**ವಕೀಲರು**
**ಶ್ರೀ ಗುರುಮಲ್ಲೇಶ್ವರ ಕಾಂಪ್ಲೆಕ್ಸ್, 1ನೇ ಮಹಡಿ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಕೊಳ್ಳೇಗಾಲ ಟೌನ್, ಚಾಮರಾಜನಗರ ಜಿಲ್ಲೆ.**

---

### PUBLIC NOTICE

**TO WHOMSOEVER IT MAY CONCERN**

NOTICE is hereby given to the general public that my clients, Sri Vishakh Venkat, S/o Sri Venkat Pashupathi Sharma and Smt. Aditi Kulkarni, W/o Sri Vishakh Venkat both residing at Flat No. C-1703, Arvind Oasis, Near 8th Mile Bus Stop, Nagasandra, Bengaluru North, Bengaluru Urban, Karnataka-560073, are desirous of purchasing the immovable agricultural property described in the Schedule below (hereinafter referred to as the "Schedule Property") from Sri G.M. Basavalingappa and Sri Manjunath G.B.

The owners have declared and represented to my client that they hold absolute, clear, and marketable title, full ownership rights, and peaceful possession over the Schedule Property free from all encumbrances, charges, liens, claims, liabilities, or disputes.

Any person, firm, institution, bank, financial institution, Government authority or other entity having or claiming any right, title, interest, share, claim, charge, lien, mortgage, lease, tenancy, easement, attachment, inheritance, encumbrance or objection of whatsoever nature over or in respect of the Schedule Property, or having any objection to the proposed sale/ transaction, is hereby called upon to notify the same in writing, together with supporting documentary evidence, to me / us within 15 (fifteen) days from the date of publication of this notice.

If no such claim or objection is received within the aforesaid period, then my client shall proceed with the execution and registration of the absolute Sale Deed on the basis that there are no claims or objections in respect of the Schedule Property, and any such claim raised thereafter shall be dealt with at the risk and responsibility of the person making the same.

**SCHEDULE PROPERTY**

**ITEM No 1**: All that piece and parcel of agriculture land bearing survey No 407/1 measuring 27 guntas situated at Bilugali Village, Biligere Hobli, Nanjangud Taluk, Mysore District bounded on:
**East by:** land bearing Survey No 407/2
**West by:** Revanna's land
**North by:** Road
**South by:** Siddappa's land

**ITEM No 2:** All that piece and parcel of agriculture land bearing survey No 407/2 measuring 13 guntas out of 26 guntas situated at Bilugali Village, Biligere Hobli, Nanjangud Taluk, Mysore District bounded on:
**East by:** Rajanna's land
**West by:** land bearing survey No 407/1
**North by:** Road
**South by:** Siddappa's land

**Sd/- Ajay R A Advocate**
# 1, 2nd Floor, Yamuna Bai Road
Madhavanagar, Bangalore 560 001
Mob: 9886175253

---

### ಪುರಸಭಾ ಕಾರ್ಯಾಲಯ, ಗುಂಡ್ಲು ಪೇಟೆ.
ಚಾಮರಾಜನಗರ ಜಿಲ್ಲೆ-571111
ಕಛೇರಿ: 08229-222226 | ಫ್ಯಾಕ್ಸ್: 08229-222226 Helpline: 08229-223377
E-mail: itstaff_ulb_gundlupet@yahoo.com | Website: www.qundlupettown.mrc.gov.in

ಸಂಖ್ಯೆ:ಪು.ಗು/ಕಿ.ಅ/ಜಿ.ಐ.ಎಸ್ ನಕ್ಷೆ/ಪಿ.ಆರ್/2026-27 ದಿ:24.09.2026

**ಪ್ರಕಟಣೆ**

ರಾಜ್ಯದಲ್ಲಿನ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿನ ಅನುಮೋದಿತ ಮಹಾಯೋಜನ ಹೊಂದಿರುವ ಹಾಗೂ ಮಹಾಯೋಜನೆ ತಯಾರಿಕೆ ವಿವಿಧ ಹಂತಗಳಲ್ಲಿರುವ ನಗರ/ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 76-ಕೆ ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಸದರಿ ಕಾಯ್ದೆಯ ಕಲಂ 12(1)(ಬಿ) ರಂತ ತಯಾರಿಸಿರುವ GIS ಆಧಾರಿತ Road Network Grid Plan ಗೆ ಸದರಿ ಕಾಯ್ದೆಯ ಕಲಂ 13(1) ರಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 358 ಟಿಟಿಪಿ 2026(ಇ), ದಿನಾಂಕ: 09.09.2026 ರಲ್ಲಿ ತಾತ್ಕಾಲಿಕ ಅನುಮೋದನೆ ನೀಡಲಾಗಿರುತ್ತದೆ.

ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಗೆ ಸಿದ್ಧಪಡಿಸಲಾಗಿರುವ GIS ಆಧಾರಿತ Road Network Grid Plan ನಕ್ಷೆಯನ್ನು ಗುಂಡ್ಲುಪೇಟೆ ಪುರಸಭೆ ಕಚೇರಿಯಲ್ಲಿ ಸಾರ್ವಜನಿಕರ ವೀಕ್ಷಣೆಗಾಗಿ ಇರಿಸಲಾಗಿರುತ್ತದೆ. ಈ ಯೋಜನೆಯಿಂದ ಬಾಧಿತರಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ/ಸೂಚನೆಗಳು ಅಥವಾ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ, ಈ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 60(ಅರವತ್ತು) ದಿನಗಳೊಳಗಾಗಿ ಈ ಕಚೇರಿಗೆ ಖುದ್ದಾಗಿ, ನೋಂದಾಯಿತ ಅಂಚೆ ಅಥವಾ ಇ-ಮೇಲ್ ಮೂಲಕ ಸಲ್ಲಿಸಬಹುದಾಗಿದೆ. ನಿಗಧಿತ 60 (ಅರವತ್ತು) ದಿನಗಳ ಅವಧಿಯೊಳಗೆ ಸ್ವೀಕರಿಸಲ್ಪಟ್ಟ ಸಲಹೆ, ಸೂಚನೆಗಳು ಹಾಗೂ ಆಕ್ಷೇಪಣೆಗಳನ್ನು ಮಾತ್ರ ಪರಿಗಣಿಸಲಾಗುವುದು. ಸದರಿ ಅವಧಿ ಮುಕ್ತಾಯಗೊಂಡ ನಂತರ ಸ್ವೀಕರಿಸಲ್ಪಡುವ ಯಾವುದೇ ಸಲಹೆ, ಸೂಚನೆ ಅಥವಾ ಆಕ್ಷೇಪಣೆಯನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಸಹಿ/- ಸದಸ್ಯ ಕಾರ್ಯದರ್ಶಿಗಳು/ಮುಖ್ಯಾಧಿಕಾರಿಗಳು,
ಪುರಸಭೆ ಯೋಜನಾ ಪ್ರಾಧಿಕಾರ ಗುಂಡ್ಲುಪೇಟೆ

---

### ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ:ಮೈಅಪ್ರಾ/ವಿ.ತ-5ಬಿ/2026-27 ದಿನಾಂಕ:23.09.2026

**ಪ್ರಕಟಣೆ**

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಶ್ರೀಮಹದೇವು.ವಿ. ರವರಿಗೆ ದಿನಾಂಕ:14.12.1990 ರಂದು ದೇವನೂರು 1ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ:2336, ನಿವೇಶನವು ಮಂಜೂರಾಗಿರುತ್ತದೆ. ದಿನಾಂಕ:14.12.1990ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ನಂತರ ಶ್ರೀ.ಮಹದೇವು.ವಿ. ರವರು 4ನೇ ಪುಸ್ತಕದ 3ನೇ ಸಂಪುಟದಲ್ಲಿ 345ನೇ ಪುಟದಲ್ಲಿ 571ನೇ ನಂಬರಾಗಿ ದಿ:14.10.1992ರಂದು ಶ್ರೀ.ಅಬ್ದುಲ್ ಶುಕೂರ್ ರವರಿಗೆ ನೊಂದಾಯಿತ ಜಿಪಿಎ ನೀಡಿರುತ್ತಾರೆ.

ನಂತರ ಶ್ರೀ.ಅಬ್ದುಲ್ ಶುಕೂರ್ ರವರು 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಇ-1-00837-2014-15 ಆಗಿ ದಿ:29.04.2014 ರಂದು ಶ್ರೀಮತಿ.ನಸೀಮ ಕೋಂ ಶ್ರೀ.ಅಬ್ದುಲ್ ಶುಕೂರ್ ರವರ ಹೆಸರಿಗೆ ನೊಂದಾಯಿತ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ.

ಅದರಂತೆ ಶ್ರೀಮತಿ.ನಸೀಮ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ವರ್ಗಾವಣೆ ಹಾಗೂ ಕ್ರಯಪತ್ರ ನೀಡಬೇಕೆಂದು ಕೋರಿರುತ್ತಾರೆ. ಮೇಲ್ಕಂಡ ನಿವೇಶನಕ್ಕೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/- ವಿಶೇಷ ತಹಸೀಲ್ದಾರ್
ವಲಯ ಕಛೇರಿ-5ಬಿ,
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

---




---

### ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा Bank of Baroda
ಪ್ರಾದೇಶಿಕ ಕಛೇರಿ, ಬರೋಡಾ ಸೌಧ, ವಿಶ್ವಮಾನವ ಡಬಲ್ ರೋಡ್, ಸರಸ್ವತಿಪುರಂ, ಮೈಸೂರು

**ಇ-ಹರಾಜು ಮಾರಾಟ ಸೂಚನೆ "ಅನುಬಂಧ – IV-A [ನಿಯಮ 6(2) & 8 (6)]**

ಇ-ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಸ್ಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, **" ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ"** ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮಿನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

| ಕ್ರ ಸಂ | ಸಾಲಗಾರರ / ಜಾಮೀನುದಾರರ / ಅಡಮಾನುದಾರ ಹೆಸರು & ವಿಳಾಸ | ತಿಳಿದಿರುವ ನಿರ್ಬಂಧಗಳೊಂದಿಗೆ ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆ, ಋಣಭಾರಗಳು ಯಾವುದಾದರೂ ಬ್ಯಾಂಕಿಗೆ ತಿಳಿದಿದ್ದಲ್ಲಿ | ಒಟ್ಟು ಬಾಕಿ ಮೊತ್ತ | ಇ-ಹರಾಜಿನ ದಿನಾಂಕ ಮತ್ತು ಸಮಯ | 1) ಮೀಸಲು ಬೆಲೆ, 2) ಇಎಂಡಿ, 3) ಬಿಡ್ ಗುಣಾಂಕ ಮೊತ್ತ, 4) ಸ್ವಾಧೀನದ ರೀತಿ | ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ. |
|---|---|---|---|---|---|---|
| | | **ಬೇಗೂರು ಶಾಖೆ** | | | | |
| 1. | **(1) ಶ್ರೀಮತಿ ರಾಜಮ್ಮ** ಕೋಂ ಫ್ರಾನ್ಸಿಸ್ ಮೆಸ್ಕಾರ್ನ್ಹಿಸ್, **(2) ಶ್ರೀ ಎಫ್ ಎಂ ರಾಜೇಶ್** ಬಿನ್ ಫ್ರಾನ್ಸಿಸ್ ಮೆಸ್ಕಾರ್ನ್ಹಿಸ್, **(3) ಶ್ರೀಮತಿ ಪುಷ್ಪಾ** ಕೋಂ ಎಫ್ ಎಂ ರಾಜೇಶ್, **ಜಾಮೀನುದಾರರು: (4) ಶ್ರೀ ಎಫ್ ಎಂ ರವಿ** ಬಿನ್ ಫ್ರಾನ್ಸಿಸ್ ಮೆಸ್ಕಾರ್ನ್ಹಿಸ್, ಇವರೆಲ್ಲರ **ವಿಳಾಸ:** ಹೊಸಪುರ, ಹಿಡಿಯಾಲ, ನಂಜನಗೂಡು, ಮೈಸೂರು-571315. | ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿ ನಂ.150800201200420006, ಹಳೆ ನಂ.152, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 10.00 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 20.00 ಮೀಟರ್‌ಗಳು, ಈ ಆಸ್ತಿಯು ಹೊಸಪುರ ಗ್ರಾಮ, ಬೇಗೂರು ಹೋಬಳಿ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿದ್ದು, ಶ್ರೀಮತಿ ರಾಜಮ್ಮ ಕೋಂ ಫ್ರಾನ್ಸಿಸ್ ಮೆಸ್ಕಾರ್ನ್ಹಿಸ್ ಅವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಡಿ ಎಂ ಬಸವಯ್ಯ ಅವರ ಭೂಮಿ, ಉತ್ತರಕ್ಕೆ: ಡಿ ಎಂ ಬಸವಯ್ಯ ಅವರ ಭೂಮಿ, ದಕ್ಷಿಣಕ್ಕೆ: ಮಾದಯ್ಯ @ ಬೊಮ್ಮಯ್ಯ ಅವರ ಮನೆ. | ರೂ. 9,92,295.77 ಜೊತೆಗೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು. | ದಿನಾಂಕ: 28.10.2026 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯವರೆಗೆ | 1) ಮೀಸಲು ಬೆಲೆ : ರೂ. 13,50,000/- 2) ಇಎಂಡಿ ಮೊತ್ತ: ರೂ.1,35,000/- 3)ಬಿಡ್ ಗುಣಾಂಕದ ಮೊತ್ತ ರೂ.10,000/- 4) ಭೌತಿಕವಾಗಿ | ದಿನಾಂಕ 27.10.2026 ರಂದು ಸಂಜೆ 4.00 ಗಂಟೆಯವರೆಗೆ |
| | | **ಮೂಡ ಶಾಖೆ** | | | | |
| 2. | **(1) ಶ್ರೀ. ಚಂದ್ರು ಡಿ ವಿ** ಬಿನ್ ವೆಂಕಟೇಶ್ ಡಿ ಹೆಚ್ # 85, ಹುಣಸೂರು-ಮೈಸೂರು ಮುಖ್ಯರಸ್ತೆ, ಹುಣಸೂರು ತಾಲ್ಲೂಕು, ದೇವರಹಳ್ಳಿ, ಬಿಳಿಕೆರೆ, ಮೈಸೂರು-571103 **(2) ಶ್ರೀ ಪರಶಿವಮೂರ್ತಿ ಹೆಚ್ ಪಿ** ಬಿನ್ ದಿವಂಗತ ಹೆಚ್ ಪಿ ಪುಟ್ಟಬಸಪ್ಪ ದೇವನಹಳ್ಳಿ ಗ್ರಾಮ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ-571103 | ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಜಂಜರ್ ಖಾತಾ ನಂ. 135, ಪರಭಾರೆ ಮಾಡಲಾದ ಭೂಮಿಯ ಸರ್ವೆ ನಂ. 2/2, ಈ ಆಸ್ತಿಯು ದೇವರಹಳ್ಳಿ ಗ್ರಾಮ, ಬಿಳಿಕೆರೆ ಹೋಬಳಿ, ಹುಣಸೂರು, ಮೈಸೂರು ಜಿಲ್ಲೆಯಲ್ಲಿದೆ. ಸ್ವತ್ತಿನ ವಿಸ್ತೀರ್ಣ 3 ಎಕರೆಗಳು, ಆಸ್ತಿಯು ಶ್ರೀ.ಡಿ.ವಿ. ಚಂದ್ರ ಬಿನ್ ಡಿ ಹೆಚ್ ವೆಂಕಟೇಶ್ ರವರ ಹೆಸರಿನಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ಭೂಮಿಯ ನಂ.4, ಪಶ್ಚಿಮಕ್ಕೆ : ಲಹಿ 4 ( ಪುಟ್ಟಸ್ವಾಮಿ ಗೌಡ ರವರ ಭೂಮಿ), ಉತ್ತರಕ್ಕೆ : ಭೂಮಿಯ ನಂ. 3, ದಕ್ಷಿಣಕ್ಕೆ : ಭೂಮಿಯ ನಂ. 1. | ರೂ. 50,15,217.88 ಜೊತೆಗೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು. | ದಿನಾಂಕ: 28.10.2026 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯವರೆಗೆ | 1) ಮೀಸಲು ಬೆಲೆ : ರೂ. 3,25,00,000/- 2) ಇಎಂಡಿ ಮೊತ್ತ: ರೂ.32,50,000/- 3)ಬಿಡ್ ಗುಣಾಂಕದ ಮೊತ್ತ ರೂ.10,000/- 4) ಭೌತಿಕವಾಗಿ | ದಿನಾಂಕ 27.10.2026 ರಂದು ಸಂಜೆ 4.00 ಗಂಟೆಯವರೆಗೆ |
| | | **ದಟ್ಟಗಳ್ಳಿ ಶಾಖೆ** | | | | |
| 3. | **ಶ್ರೀ. ಗಗನ್ ಗಂಗಾಧರ,** ಟಿ-326 3ನೇ ಮಹಡಿ ಎ ಬ್ಲಾಕ್, ಸೌಪರ್ಣಿಕಾ ಬ್ಲೂ ಬೆಲ್ಸ್ ಅಪಾರ್ಟ್‌ಮೆಂಟ್, ವಿಜಯನಗರ, 3ನೇ ಹಂತ ಮೈಸೂರು, ರೂಸ್ಟ್ ಹೋಟೆಲ್ ಹಿಂಭಾಗ, ಮೈಸೂರು-570030. | ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನದ ಆಸ್ತಿಯ ನಿವೇಶನ ನಂ.02, ಜಂಜರ್ ನಂ.583, ಆಸ್ತಿಯ ಯೂನಿಕ್ ನಂ.152200200705822262, ಸರ್ವೆ ನಂ.57/4, 57/5 & 57/6, ಈ ಆಸ್ತಿಯು ದೊಡ್ಡಕಾಡನಹಳ್ಳಿ ಗ್ರಾಮ, ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 09.14 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 12.20 ಮೀಟರ್‌ಗಳು, ಒಟ್ಟು ವಿಸ್ತೀರ್ಣ 111.50 ಚದರ ಮೀಟರ್, ಈ ಆಸ್ತಿಯು ಶ್ರೀಮತಿ ಗಗನ್ ಜಿ ಬಿನ್ ಗಂಗಾಧರ ಸ್ವಾಮಿರವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.1, ಪಶ್ಚಿಮಕ್ಕೆ: ಆಸ್ತಿ ನಂ.3, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ರಸ್ತೆ. | ರೂ. 45,88,904.93 ಜೊತೆಗೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು. | ದಿನಾಂಕ: 28.10.2026 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ | ಮೀಸಲು ಬೆಲೆ : ರೂ. 23,00,000/- ಇಎಂಡಿ ಮೊತ್ತ: ರೂ.2,30,000/- ಬಿಡ್ ಗುಣಾಂಕದ ಮೊತ್ತ ರೂ.10,000/- 4) ಭೌತಿಕವಾಗಿ | ದಿನಾಂಕ 27.10.2026 ರಂದು ಸಂಜೆ 4.00 ಗಂಟೆಯವರೆಗೆ |
| 4. | **ಶ್ರೀ. ಸಿದ್ದರಾಜೇಗೌಡ ಎಂ ಸಿ** ಬಿನ್ ಚನ್ನೇಗೌಡ. ನಂ.47, ಮಾರಿಗುಡಿ ದೇವಸ್ಥಾನ ರಸ್ತೆ, ಮದ್ದೂರು ತಾಲ್ಲೂಕು, ಭಾರತೀನಗರ ಮಂಡ್ಯ-571422. | ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ. 01 ಮತ್ತು ಪಂಚಾಯತ್ ದಾಖಲೆ ಪ್ರಕಾರ ಸ್ವತ್ತಿನ ನಂ. 2104/01 ಮತ್ತು ಯೂನಿಕ್ ನಂ. 152200404162025392, ಸರ್ವೆ ನಂ. 178/2, ಈ ಆಸ್ತಿಯು ಮೈದನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು-571130 ರಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 9.14 ಚದರ ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ : 12.20 ಚದರ ಮೀಟರ್‌ಗಳು, ಒಟ್ಟು ವಿಸ್ತೀರ್ಣ 111.51 ಚದರ ಮೀಟರ್‌ಗಳು, ಆಸ್ತಿಯು ಶ್ರೀ. ಸಿದ್ದರಾಜೇಗೌಡ ಎಂಸಿ ಬಿನ್ ಚನ್ನೇಗೌಡ ರವರ ಹೆಸರಿನಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ಸಿ ಎ ನಿವೇಶನ, ಪಶ್ಚಿಮಕ್ಕೆ : ಸ್ವತ್ತಿನ ನಂ. 02, ಉತ್ತರಕ್ಕೆ : ಸರ್ವೆ ನಂ. 178/5 ಎಕ್ಸ್‌ಟೆನ್ಷನ್, ದಕ್ಷಿಣಕ್ಕೆ : ಸ್ವತ್ತಿನ ರಸ್ತೆ. | ರೂ. 34,20,412.69 ಜೊತೆಗೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು. | ದಿನಾಂಕ: 28.10.2026 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ | ಮೀಸಲು ಬೆಲೆ : ರೂ. 27,00,000/- ಇಎಂಡಿ ಮೊತ್ತ: ರೂ.2,70,000/- ಬಿಡ್ ಗುಣಾಂಕದ ಮೊತ್ತ ರೂ.10,000/- 4) ಭೌತಿಕವಾಗಿ | ದಿನಾಂಕ 27.10.2026 ರಂದು ಸಂಜೆ 4.00 ಗಂಟೆಯವರೆಗೆ |
| | | **ಮೇಟಗಳ್ಳಿ ಶಾಖೆ** | | | | |
| 5. | **ಶ್ರೀ ಮಲ್ಲೇಶ್** ಬಿನ್ ಲೇಟ್ ಈರಣ್ಣ, ಸಂಖ್ಯೆ 179 ಎ ಬ್ಲಾಕ್, 1ನೇ ಮೇನ್, 9ನೇ ಕ್ರಾಸ್, ಮಹದೇವಪುರ, ಮೈಸೂರು, ಮಾನಂದವಾಡಿ ರಸ್ತೆ, ಮೈಸೂರು-570008. | ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ನಿವೇಶನದ ಖಾತಾ ಜಂಜರ್ ನಂ. 67, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 25.00 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 35.00 ಅಡಿ, ಒಟ್ಟು 875.00 ಚದರ ಅಡಿ, ಸ್ವತ್ತಿನ ನಂ. 27/ಡಿ (ಹಳೆ ನಂ. 27), ಈ ಆಸ್ತಿಯು ದೇವಯ್ಯನಹುಂಡಿ, ಶ್ರೀರಾಂಪುರ, 2ನೇ ಹಂತ, ಚಾಮರಾಜ ಮೊಹಲ್ಲಾ, ಮೈಸೂರು-570008 ರಲ್ಲಿದ್ದು, ಆಸ್ತಿಯು ಶ್ರೀ. ಮಲ್ಲೇಶ್ ಬಿನ್ ಈರಣ್ಣ ರವರ ಹೆಸರಿನಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ತಮ್ಮಡಿ ದ್ಯಾವಣ್ಣ ರವರ ಆಸ್ತಿ, ಪಶ್ಚಿಮಕ್ಕೆ : ಸುರೇಶ್ ರವರ ಆಸ್ತಿ, ಉತ್ತರಕ್ಕೆ : 5 ಅಡಿ ಕಾಮನ್ ಪ್ಯಾಸೇಜ್, ದಕ್ಷಿಣಕ್ಕೆ : ಸೀಹಳ್ಳಿ ವೆಂಕಟಯ್ಯ ರವರ ಆಸ್ತಿ ಮತ್ತು ರಸ್ತೆ. | ರೂ. 40,28,324.93 ಜೊತೆಗೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು. | ದಿನಾಂಕ: 28.10.2026 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯವರೆಗೆ | ಮೀಸಲು ಬೆಲೆ : ರೂ. 47,50,000/- ಇಎಂಡಿ ಮೊತ್ತ: ರೂ.4,75,000/- ಬಿಡ್ ಗುಣಾಂಕದ ಮೊತ್ತ ರೂ.10,000/- 4) ಭೌತಿಕವಾಗಿ | ದಿನಾಂಕ 27.10.2026 ರಂದು ಸಂಜೆ 4.00 ಗಂಟೆಯವರೆಗೆ |

ವಿವರವಾದ ನಿಯಮಗಳು ಮತ್ತು ಮಾರಾಟದ ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ ಲಿಂಕ್ **https://www.bankofbaroda.in/e-auction.htm** ಮತ್ತು ಆನ್‌ಲೈನ್ ಹರಾಜು ಪೋರ್ಟಲ್ **https://baanknet.com** ಅನ್ನು ಉಲ್ಲೇಖಿಸಿ/ಭೇಟಿ ನೀಡಿ ಅಥವಾ ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಬಹುದು, **ದೂರವಾಣಿ ಸಂಖ್ಯೆ : 0821 2571909.**

ದಿನಾಂಕ : 24.09.2026
ಸ್ಥಳ : ಮೈಸೂರು

ಸಹಿ/ ಅಧಿಕೃತ ಅಧಿಕಾರಿ,
ಬ್ಯಾಂಕ್ ಆಫ್ ಬರೋಡ